## ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ. ಧಾರವಾಡ

ಸಿ.ಸಿ.ನಂಬರ : **3532/2022**

**ಫಿರ್ಯಾದಿದಾರರು** :- ಕರ್ನಾಟಕ ಸರಕಾರ,
ಪೊಲೀಸ ಸಬ್ ಇನ್ಸಪೆಕ್ಟರ,
ಉಪನಗರ ಪಿ.ಎಸ್, ಧಾರವಾಡ.

ವಿರುದ್ಧ

**ಆರೋಪಿ** :- ಹೇಮಣ್ಣ ಮಲ್ಲಪ್ಪ ಕೆಂಗೇರಿ
ವಯಾಃ 32 ವರ್ಷ ಉಃ ಚಾಲಕ
ಸಾಃ ನೆಹರು ನಗರ ದುರ್ಗಮ್ಮ ಗುಡಿ ಹತ್ತಿರ
ಧಾರವಾಡ

**-: ದೋಷಾರೋಪಣೆ :-**

ನಾನು ಮಲ್ಲೇಶಿ ಪರಶುರಾಮ ಮೋಹಿತೆ ಪ್ರಧಾನ ದಿವಾಣಿ ಮತ್ತು ಪ್ರಧಾನ ಜೆ.ಎಂ.ಎಫ್ .ಸಿ ನ್ಯಾಯಾಧೀಶರು ಧಾರವಾಡ, ನಿನ್ನ ಮೇಲೆ ಮಾಡುವ ದೋಷಾರೋಪಣೆ ಎನೆಂದರೆ.

ದಿಃ 23-11-2021 ರಂದು ರಾತ್ರಿ 8-00 ಗಂಟೆ ಸುಮಾರಿಗೆ ಧಾರವಾಡ ಉಪನಗರ ಪೋಲಿಸ ಠಾಣೆ ವ್ಯಾಪ್ತಿಯಲ್ಲಿ ಬರುವ ಹೆಚ್.ಡಿ.ಎಂ.ಸಿ ಆವರಣದಲ್ಲಿ ಪಿರ್ಯಾದಿ ಸಾಕ್ಷಿದಾರ ನಂ.4 ಮತ್ತು 5 ನೇದ್ದವರೊಂದಿಗೆ ಕೆಲಸದ ಬಗ್ಗೆ ಮಾತನಾಡಿ ಅವರು ಹೋದ ನಂತರ ಧಾರವಾಡ ಕಲಾಭವನ ಆವರಣದಲ್ಲಿ ಪಿರ್ಯಾದಿ ತಮ್ಮ ಕೆಲಸಗಾರರಿಗೆ ಪೋನ ಮೂಲಕ ಮಾತನಾಡುತ್ತಾ ತಮ್ಮ ದ್ವಿಚಕ್ರ ವಾಹನದ ಮೇಲೆ ಕುಳಿತಾಗ ಆರೋಪಿಯಾದ ನೀನು ಯಾರಾದರೂ ಗಾಂಜಾ ಸೇದುತ್ತಿರಬಹುದು ಎಂದು ನೋಡುತ್ತಿದ್ದಾಗ ಪಿರ್ಯಾದಿಯನ್ನು ನೋಡಿ ಈತನು ಗಾಂಜಾ ಸೇದುತ್ತಿರಬಹುದು ಎಂದು ತಿಳಿದು ಪಿರ್ಯಾದಿಯ ಹಿಂದಿನಿಂದ ಬಂದು ಒಂದು ಕಟ್ಟಿಗೆ ಬಡಿಗೆಯಿಂದ ಪಿರ್ಯಾದಿಯ ಮುಂದೆಲೆಗೆ ಬಲಗೈ ಬುಜಕ್ಕೆ ಹೊಡೆದು ಗಾಯಪಡಿಸಿ ದ್ವಿಚಕ್ರ ವಾಹನದಿಂದ ಕೆಳಗೆ ಬಿದ್ದರು ಸಹಿತ ಬಿಡದೇ ಮುಖಕ್ಕೆ ಹೊಡೆಯುತ್ತಿದ್ದಾಗ ಪಿರ್ಯಾದಿ ತನ್ನ ಬಲಗೈ ಮುಂಗೈಯನ್ನು ಮುಖದ ಮೇಲೆ ಹಿಡಿದಾಗ ಬಲಗೈ ಮುಂಗೈಗೆ ತೀವ್ರವಾಗಿ ಗಾಯಪಡಿಸಿ ಓಡಿಹೋಗಿ ನೀನು ಆ ಮೂಲಕ ಭಾ.ದಂ.ಸಂ.ಕಲಂ 326 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರದ ಪರಿಮಿತಿಯಲ್ಲಿ ಮಾಡಿರುತ್ತೀರಿ.

ಈ ಮೇಲಿನ ಆರೋಪಣೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ಅಧಿವಿಚಾರಣೆಗೆ ಒಳಪಡತಕ್ಕದ್ದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

(ಮಲ್ಲೇಶಿ ಪರಶುರಾಮ ಮೋಹಿತೆ.)
ಪ್ರಧಾನ ದಿವಾಣಿ ನ್ಯಾಯಾದೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ.. ಧಾರವಾಡ

**ಪ್ರಧಾನ  ದಿವಾಣಿ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ. ಧಾರವಾಡ**

ಸಿ.ಸಿ.ನಂಬರ ಃ **3532/2022**

**ಫಿರ್ಯಾದಿದಾರರು** ಃ- ಕರ್ನಾಟಕ ಸರಕಾರ,
ಪೊಲೀಸ ಸಬ್ ಇನ್ಸಪೆಕ್ಟರ,
ಉಪನಗರ ಪಿ.ಎಸ್, ಧಾರವಾಡ.

ವಿರುದ್ಧ

**ಆರೋಪಿ** ಃ- ಹೇಮಣ್ಣ ಮಲ್ಲಪ್ಪ ಕೆಂಗೇರಿ
ವಯಾಃ 32 ವರ್ಷ ಉಃ ಚಾಲಕ
ಸಾಃ ನೆಹರು ನಗರ ದುರ್ಗಮ್ಮ ಗುಡಿ ಹತ್ತಿರ
ಧಾರವಾಡ

**ಆಪಾದನೆ**

ಪ್ರ,1. ಸದರಿ ಆಪಾದನೆಯನ್ನು ಒದಿ ಹೇಳಿ ದ್ದು ತಿಳಿಯಿತೇ ?

ಉಃ

ಪ್ರ.2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರೋ ?

ಉಃ

(ಸದರಿ ಆಪಾದನೆಯನ್ನು ಆರೋಪಿಗೆ ಅರ್ಥವಾಗುವ ಭಾಷೆಯಲ್ಲಿ ಒದಿ ಹೇಳಿ ಕೇಳಲಾಗಿ ಅವರು ಕೊಟ್ಟ ಉತ್ತರಗಳನ್ನು ಕೊಟ್ಟಂತೆ ಬರೆದುಕೊಳ್ಳಲಾಗಿದೆಂದು ದೃಢೀಕರಿಸುತ್ತೇನೆ)

(ಮಲ್ಲೇಶಿ ಪರಶುರಾಮ ಮೋಹಿತೆ.)
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ.. ಧಾರವಾಡ